ಅಸಲ ದಾವಾ ಸಂಖ್ಯೆ.184/2020

ಪಿ.ಡಬ್ಲು. **2**

**ಸಾಕ್ಷಿಯನ್ನು ದಿನಾಂಕಃ 17.09.2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎ.ಎಸ್.ವಾಯ್ ., ಪ್ರತಿವಾದಿ ನಂ.1 ರ ಪರ ವಕೀಲರಿಂದಃ**

ವಾದಿ ಈ ದಾವೆ ದಾವಾ ಆಸ್ತಿ ತನ್ನದೆಂದು ದಾಖಲಿಸಿದ್ದಾನೆ. ದಾವಾ ಆಸ್ತಿ ವಾದಿಗೆ ಸೇರಿದ ಬಗ್ಗೆ ನಾನು ಯಾವುದೇ ಕಾಗದ ಪತ್ರಗಳನ್ನು ನೋಡಿಲ್ಲ. ದಾವಾ ಆಸ್ತಿ ಸರ್ವೆ ನಂಬರ ಮತ್ತು ಕ್ಷೇತ್ರ ನನಗೆ ಗೊತ್ತಿಲ್ಲ.

ದಾವಾ ಆಸ್ತಿ ಮೊದಲು ಪ್ರತಿವಾದಿಯ ತಂದೆ ಹೆಸರಲ್ಲಿತ್ತು ನಂತರ ವಾದಿಗೆ ಬಂದಿರುತ್ತದೆ. ನಾಗಪ್ಪನಿಂದ ಬಸಪ್ಪ ಹೆಸರಿಗೆ ದಾವಾ ಆಸ್ತಿ ಬಂದ ಕುರಿತು ದಾಖಲೆ ನಾನು ನೋಡಿದ್ದೇನೆ. ಮುಂದೂವರೆದು ಸಾಕ್ಷಿ ವಾದಿಯ ಹೆಸರಲ್ಲಿರುವ ಉತಾರೆ ನೋಡಿದ್ದೇನೆ ಎಂದು ನುಡಿಯುತ್ತಾರೆ. ಯಾವ ಉತಾರೆ ನೋಡಿದ್ದಿರಾ ಎಂಬ ಪ್ರಶ್ನೇಗೆ ಸಾಕ್ಷಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಯರು ವಾದಿಗೆ ತಕರಾರು ನೀಡಿದಕ್ಕೆ ಪಿಡಿಓ ಗ್ರಾಮ ಪಂಚಾಯತ ಲೋಕಾಪೂರ ಇವರು ವಾದಿಗೆ ನೋಟಿಸ ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಗಳಿಗೆ ವಾದಿ ಯಾವುದೇ ರೀತಿಯಿಂದ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿ ನಾನೇ ನೀಡಿದ್ದೇನೆ. ಅದರಲ್ಲಿ ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ದಾಖಲೆಗಳಲ್ಲಿ ವಾದಿಯ ಹೆಸರು ನಮೂದು ಇದ್ದ ಬಗ್ಗೆ ನಾನು ನೋಡಿದ್ದೇನೆ ಎಂದು ಬರೆಸಿರುತ್ತೇನೆ.

ವಾದಿ ಮತ್ತು ನಾನು ಅಕ್ಕಪಕ್ಕದ ಮನೆಯವರು ಇಬ್ಬರೂ ತುಂಬಾ ದಿನಗಳಿಂದ ಪರಿಚಿತರು ಎಂದರೆ ಸರಿ. ವಾದಿಯ ಹೇಳಿಕೆಯ ಮೇರೆಗೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ತನಗೂ ದಾವಾ ಬಗ್ಗೆ ಮಾಹಿತಿ ಇದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳಲ್ಲಿ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ಮುಧೋಳ.

ಸಾಕ್ಷಿಯ ಸಹಿ